**ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ರಮೇಶ್ ಬಾಬು ಇವರು ನಿಯಮ 72 ರಡಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ವಿಷಯ:-** ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅಡಿಯಲ್ಲಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಂ. ನಾಗರಾಜ್‌ರವರು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ಟೌನ್ ನಲ್ಲಿರುವ ಅಂಕಿತ ವಿದ್ಯಾಸಂಸ್ಥೆಯ ಕೌಶಲ್ಯ ಅಕಾಡೆಮಿಗೆ ಕಾಂಪೌಂಡ್ ಮತ್ತು ಶೌಚಾಲಯ ನಿರ್ಮಾಣಕ್ಕೆ 5 ಲಕ್ಷ ರೂಪಾಯಿಗಳನ್ನು ಅನುದಾನದ ರೂಪದಲ್ಲಿ ನೀಡಿರುತ್ತಾರೆ. ಬೆಳಗಾವಿ ಜಿಲ್ಲಾಧಿಕಾರಿಗಳು ಇದನ್ನು ಅನುಮೋದಿಸಿ ಕಾಮಗಾರಿಯ ಅನುಷ್ಠಾನಕ್ಕಾಗಿ ತುಮಕೂರು ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಿದ್ದು, ತದನಂತರ ತುಮಕೂರು ಜಿಲ್ಲಾಧಿಕಾರಿಗಳು ಮಧುಗಿರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಅಂದಾಜು ಪಟ್ಟಿ ಸಹಿತ ವರದಿ ಕೇಳಿದ್ದು, ಸದರಿ ಇಂಜಿನಿಯರ್ ಕಾಮಗಾರಿಯ ವರದಿ ನೀಡಿರುತ್ತಾರೆ. ತದನಂತರ ಶಾಲೆಗೆ ಅನುದಾನ ಬಿಡುಗಡೆ ಮಾಡುವ ಬದಲು ತುಮಕೂರು ಜಿಲ್ಲಾಧಿಕಾರಿಗಳು ಆಡಿಟ್ ವರದಿ ಪಡೆದು, ಅಭಿಪ್ರಾಯಕ್ಕಾಗಿ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಕಳುಹಿಸಿರುತ್ತಾರೆ. ಕಾನೂನು ಬಾಹಿರವಾಗಿ ಶಾಸಕರ ಅನುದಾನವನ್ನು ಹಿಂದಕ್ಕೆ ಪಡೆದಿರುವ ಯೋಜನಾ ಇಲಾಖೆ ಇದುವರೆಗೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಕುಂಟು ನೆಪವೊಡ್ಡಿ ಸರ್ಕಾರ ಅನುದಾನಗಳನ್ನು ಹಿಂದಕ್ಕೆ ಪಡೆಯುತ್ತಿದೆ. ಕಾಮಗಾರಿಯ ಪೂರ್ವದಲ್ಲೇ ಆಡಿಟ್ ಅಭಿಪ್ರಾಯ ಪಡೆಯುವುದು ಶಾಸಕರ ಅನುದಾನವನ್ನು ತಡೆಹಿಡಿಯುವ ದುರುದ್ದೇಶದಿಂದ ಕೂಡಿದ್ದು, ಶಾಸಕರ ವಿವೇಚನಾ ಅಧಿಕಾರವನ್ನು ಮೊಟಕುಗೊಳಿಸುವ ಪ್ರಯತ್ನವಾಗಿರುತ್ತದೆ. ಈ ಸಂಬಂಧ ಸೂಕ್ತಕ್ರಮ ಕೈಗೊಂಡು ಶಾಸಕರ ಅನುದಾನ ಬಿಡುಗಡೆ ಮಾಡಲು ನಿರ್ದೇಶನ ನೀಡುವ ಕುರಿತು.

******

**ಉತ್ತರ:-**

ರಾಜ್ಯ ಸರ್ಕಾರವು 2001-02ನೇ ಸಾಲಿನಲ್ಲಿ ಕೆಲ್ಯಾಡ್ಸ್ ಯೋಜನೆಯನ್ನು ಸ್ಥಳೀಯ ಜನರ ಆಶೋತ್ತರಗಳನ್ನು ಈಡೇರಿಸುವುದಕ್ಕಾಗಿ ಹಾಗೂ ಬಡವರು ಮತ್ತು ದುರ್ಬಲ ವರ್ಗದವರಿಗೆ ಉಪಯೋಗವಾಗುವ ಆಸ್ತಿಪಾಸ್ತಿಗಳನ್ನು ಸೃಜಿಸುವುದಕ್ಕಾಗಿ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಉದ್ಯೋಗವನ್ನು ಒದಗಿಸುವ ಸಲುವಾಗಿ 2001-02ನೇ ಸಾಲಿನಲ್ಲಿ ರೂ.25.00 ಲಕ್ಷಗಳ ಅನುದಾನದಿಂದ ಕೆಲ್ಯಾಡ್ಸ್ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, 2006-07ನೇ ಸಾಲಿನಲ್ಲಿ ಅನುದಾನದ ಮೊತ್ತವನ್ನು ರೂ.1.00 ಕೋಟಿಗೆ, 2013-14ನೇ ಸಾಲಿನಿಂದ ರೂ.2.00 ಕೋಟಿಗಳಿಗೆ ಹೆಚ್ಚಿಸಲಾಗಿರುತ್ತದೆ. ಸದರಿ ಯೋಜನೆಗೆ ಮಾರ್ಗಸೂಚಿಯನ್ನು ಮೇ-2014ರಲ್ಲಿ ಪರಿಷ್ಕರಿಸಿ ಹೊರಡಿಸಲಾಗಿರುತ್ತದೆ.

ಸದರಿ ಮಾರ್ಗಸೂಚಿಯ ಅನುಬಂಧ-III ಕ್ರ. ಸಂ 1 ಮತ್ತು 2 ರಲ್ಲಿನ ಪಟ್ಟಿಯಂತೆ ಸರ್ಕಾರಿ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಅನುದಾನ ನೀಡಬಹುದಾಗಿರುತ್ತದೆ. ಮಾನ್ಯ ಶಾಸಕರು ಕೆಲ್ಯಾಡ್ಸ್ ಮಾರ್ಗಸೂಚಿಯನುಸಾರ ಕಾಮಗಾರಿಗಳನ್ನು ಪ್ರಸ್ತಾಪಿಸಿದ್ದಲ್ಲಿ, ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿಗಳು ಸರ್ಕಾರದ ನಿರ್ದೇಶನ/ಮಾರ್ಗದರ್ಶನಗಳನ್ನು ಪಡೆಯುವ ಅವಶ್ಯಕತೆ ಇರುವುದಿಲ್ಲ.

ಆದರೆ, ಶ್ರೀ ಎಂ. ನಾಗರಾಜ್‌ರವರು, ಮಾನ್ಯ ಶಾಸಕರು ಖಾಸಗಿ ಶಾಲೆಗೆ ಅನುದಾನ ನೀಡಲು ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತಾಪಿತ ಶಾಲೆಯು ಸರ್ಕಾರಿ ಶಾಲೆಯೇ ಅಥವಾ ಖಾಸಗಿ ಶಾಖೆಯೇ ಎಂಬುದನ್ನು ಖಚಿತಪಡಿಸಿಕೊಳ್ಳದೇ, ಸ್ವೀಕೃತ ಪ್ರಸ್ತಾವನೆಯಂತೆ, ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಇವರು ಕಾಮಗಾರಿ ಅನುಷ್ಠಾನಕ್ಕಾಗಿ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ ಇವರಿಗೆ ಕಾಮಗಾರಿ ಅನುಷ್ಠಾನ ಮಂಜೂರಾತಿ ನೀಡಿರುತ್ತಾರೆ.

...2

ಆದರೆ, ಜಿಲ್ಲಾಧಿಕಾರಿ, ತುಮಕೂರು ಇವರು ಖಾಸಗಿ ಶಾಲೆಗಳಿಗೆ ಅನುದಾನ ನೀಡಲು ಮಾರ್ಗಸೂಚಿಯಡಿ ಅವಕಾಶವಿಲ್ಲ ಹಾಗೂ ಎರಡು ವರ್ಷಕ್ಕೂ ಮೇಲ್ಪಟ್ಟು ಕಾಮಗಾರಿಗಳ ಅನುಷ್ಠಾನಕ್ಕೆ ಅವಕಾಶವಿಲ್ಲದಿರುವುದರಿಂದ ಸದರಿ ಕಾಮಗಾರಿ ಅನುಷ್ಠಾನಕ್ಕೆ ಸರ್ಕಾರದಿಂದ ಸೂಕ್ತ ನಿರ್ದೇಶನವನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಅಂಕಿತ ಎಜುಕೇಷನಲ್ ಟ್ರಸ್ಟ್ ಶಾಶ್ವತ ಅನುದಾನ ರಹಿತ ಶಿಕ್ಷಣ ಸಂಸ್ಥೆಯಾಗಿ ಸರ್ಕಾರದಿಂದ ನೋಂದಣಿಯಾಗಿರುತ್ತದೆ ಹಾಗೂ ಪ್ರಸ್ತಾಪಿತ ಕಾಮಗಾರಿಯು 2023-24ನೇಸಾಲಿನ ಕಾಮಗಾರಿಯಾಗಿದ್ದು, ಕೆಲ್ಯಾಡ್ಸ್ ಮಾರ್ಗಸೂಚಿ ಕಂಡಿಕೆ-4.1ರನ್ವಯ ಎರಡು ವರ್ಷಕ್ಕೂ ಮೇಲ್ಪಟ್ಟು ಕಾಮಗಾರಿಗಳ ಅನುಷ್ಠಾನಕ್ಕೆ ಅವಕಾಶವಿಲ್ಲ. ಆದ್ದರಿಂದ, ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಪರಿಷ್ಕೃತ ಮಾರ್ಗಸೂಚಿ-2014ರಂತೆ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿ, ತುಮಕೂರು ಜಿಲ್ಲೆ ಇವರಿಗೆ ಹಿಂಬರಹ ನೀಡಲಾಗಿರುತ್ತದೆ. ಆದರೆ, ಪ್ರಸ್ತಾಪಿತ ಕಾಮಗಾರಿಯ ಅನುದಾನವು ಕೆಲ್ಯಾಡ್ಸ್ ಯೋಜನೆಯ ರಾಷ್ಟ್ರೀಕೃತ ಬ್ಯಾಂಕ್ ಖಾತೆಗೆ ಜಮೆಯಾಗಿರುವುದಿಲ್ಲ. ಆದ್ದರಿಂದ, ಸರ್ಕಾರವು ಅನುದಾನ ಬಿಡುಗಡೆಯನ್ನು ತಡೆಹಿಡಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಪರಿಷ್ಕೃತ ಮಾರ್ಗಸೂಚಿ-2014ರ ಅನುಬಂಧ-III ಕ್ರ. ಸಂ 1 ಮತ್ತು 2 ರಲ್ಲಿರುವಂತೆ ಖಾಸಗಿ ಅನುದಾನರಹಿತ ಶಾಲೆಗಳಿಗೆ ಅನುದಾನ ನೀಡಲು ಅವಕಾಶವಿರುವುದಿಲ್ಲ ಹಾಗೂ ಮಾರ್ಗಸೂಚಿ ಕಂಡಿಕೆ-4.1 ರಂತೆ ಎರಡು ವರ್ಷಕ್ಕೂ ಮೇಲ್ಪಟ್ಟ ಕಾಮಗಾರಿಗಳ ಅನುಷ್ಠಾನಕ್ಕೆ ಅವಕಾಶವಿಲ್ಲ. ಆದ್ದರಿಂದ, ಕೆಲ್ಯಾಡ್ಸ್ ಮಾರ್ಗಸೂಚಿಯನುಸಾರ ಕ್ರಮವಹಿಸಲಾಗುತ್ತಿದೆ ಎಂಬ ಅಂಶವನ್ನು ಮಾನ್ಯ ಶಾಸಕರ ಗಮನಕ್ಕೆ ತರಬಯಸುತ್ತೇನೆ.

ಸಂಖ್ಯೆ: ಪಿಡಿಎಸ್ 05 ಕೆಎಲ್ಎಸ್ 2026

(ಡಿ. ಸುಧಾಕರ್)
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖಾ ಸಚಿವರು.